ಒ ಎಸ್ ನಂಃ **11/2015**

**ಡಿಡಬ್ಲ್ಯೂಃ** 2

ಪ್ರಮಾಣ ವಚನ ಭೋದಿಸಿದ ದಿನಾಂಕ ಃ**11.04.2025**

ಮುಂದುವರಿದ ಪಾಟೀ ಸವಾಲುಃ ಮೃತ **1** ನೇ ಪ್ರತಿವಾದಿ ವಾರಾಸುದಾರರ ಪರ ಃ ಶ್ರೀಯುತ ಕೆ ಎನ್ ಎಸ್ ವಕೀಲರಿಂದಃ

ಕುಮ್ಕಿ ಜಾಗದ ಸರ್ವೆ ಸಂ. 54/1ಬಿ ಆಗಿದ್ದು ಅದರ ವಿಸ್ತೀರ್ಣ 5 ಎಕರೆ 73 ಸೆಂಟ್ ಆಗಿರುತ್ತದೆ. ಅದು ನನ್ನ ತಂಗಿ ಸುನಂದರವರ ಸ್ವಾಧೀನದಲ್ಲಿ ಈ ಮೊದಲು ಇತ್ತು, ಆನಂತರದಲ್ಲಿ ಅದು 3 ನೇ ಪ್ರತಿವಾದಿಯ ಸ್ವಾದೀನದಲ್ಲಿರುತ್ತದೆ. 3 ನೇ ಪ್ರತಿವಾದಿ ಈ ದಿನ ನ್ಯಾಯಾಲಯಕ್ಕೆ ನನ್ನೊಂದಿಗೆ ಬಂದಿರುತ್ತಾರೆ.

2. ನನ್ನ ತಂದೆಯ ತಂದೆ ಬೊಳಿಯ ಪೂಜಾರಿರವರನ್ನು ನೋಡಿಲ್ಲ. ಅವರು ಯಾವಾಗ ಮೃತರಾದರು ಎಂದು ಕೂಡಾ ನನಗೆ ಗೊತ್ತಿಲ್ಲ. ಬೊಳಿಯ ಪೂಜಾರಿರವರು ಜೀವಂತ ಇದ್ದಾಗ ಅವರು ಅವರ ಮಕ್ಕಳ ಜೊತೆ ಒಂದೇ ಮನೆಯಲ್ಲಿ ಇದ್ದರಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಬೊಳಿಯ ಪೂಜಾರಿರವರು ವಾಸವಾಗಿದ್ದ ಮನೆ ದಾವಾ ಸ್ವತ್ತುಗಳ ಪೈಕಿ ಯಾವ ಜಾಗದಲ್ಲಿ ಇತ್ತು ಎಂದು ನನಗೆ ಗೊತ್ತಿಲ್ಲ. ಬೊಳಿಯ ಪೂಜಾರಿರವರ ಹೆಣ್ಣು ಮಕ್ಕಳಿಗೆ ಯಾವ್ಯಾವ ಇಸವಿಯಲ್ಲಿ ಮದುವೆ ಆಯಿತು ಎಂದು ನನಗೆ ಗೊತ್ತಿಲ್ಲ.

3. ಗೇಣಿ ಜಮೀನುಗಳ ಗೇಣಿಯನ್ನು ಯಾರು ಕೊಡುತ್ತಿದ್ದರು ಎನ್ನುವ ಪ್ರಶ್ನೆಗೆ ಸಾಕ್ಷಿಯು ಗೇಣಿ ಜಮೀನುಗಳು ನಮ್ಮ ತಂದೆಯ ಸ್ವಾದೀನದಲ್ಲಿ ಇದ್ದ ಕಾರಣ ಅವರೇ ಕೊಡುತ್ತಿದ್ದರು ಎಂದು ನುಡಿಯುತ್ತಾರೆ. ದಾವಾ ಐಟಂ ನಂ. 1 ರಿಂದ 16 ನಿಮ್ಮ ತಂದೆಯ ಸ್ವಾಧೀನದಲ್ಲಿ ಇದ್ದವಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ನನ್ನ ತಂದೆಯ ಸ್ವಾಧೀನದಲ್ಲಿ 4 ಸರ್ವೆ ನಂ.ಗಳ ಸ್ವತ್ತುಗಳು ಇದ್ದವು ಎಂದು ನುಡಿಯುತ್ತಾರೆ. ಉಳಿದ ಸರ್ವೆ ನಂ.ಗಳು ನನ್ನ ಚಿಕ್ಕಪ್ಪ ಶೀನಪ್ಪ ಪೂಜಾರಿ ಮತ್ತು ಕೃಷ್ಣಪ್ಪ ಪೂಜಾರಿಯವರ ಸ್ವಾಧೀನದಲ್ಲಿ ಇದ್ದವು.

4. 1954 ನೇ ಇಸವಿಯಲ್ಲಿ ಬೊಳಿಯ ಪೂಜಾರಿ ಇದ್ದರಾ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. 1954 ನೇ ಇಸವಿಯಲ್ಲಿ ನನ್ನ ತಂದೆ ಹಾಗೂ

ಚಿಕ್ಕಪ್ಪಂದಿರು ಜೊತೆಯಲ್ಲಿ ವಾಸವಿದ್ದ ಬಗ್ಗೆ ಕೂಡಾ ನನಗೆ ಗೊತ್ತಿಲ್ಲ. ನನ್ನ ತಂದೆ ವಾಸ್ತವ್ಯ ಇದ್ದ ಮನೆಯಲ್ಲಿ ನಾವು (ನಾರಾಯಣ ಪೂಜಾರಿಯವರ ಮಕ್ಕಳು) ಇದ್ದೇವೆ. ಆ ಮನೆಯನ್ನು 1984 ನೇ ಇಸವಿಯಲ್ಲಿ ಕಟ್ಟಲಾಗಿದೆ. ಅದಕ್ಕೂ ಮೊದಲು ಮನೆ ಪಕ್ಕದಲ್ಲಿಯೇ ಇತ್ತು. ಆ ಮನೆ ನನ್ನ ಅಜ್ಜ ಕಟ್ಟಿಸಿದ್ದೋ, ನನ್ನ ತಂದೆ ಕಟ್ಟಿಸಿದ್ದೋ ಅಥವಾ ಹಳೆಯದೋ ಎಂದು ನನಗೆ ಗೊತ್ತಿಲ್ಲ. ಹೊಸ ಮನೆ ಕಟ್ಟಿಸುವ ಮೊದಲು ನನ್ನ ಚಿಕ್ಕಪ್ಪಂದಿರು ಎಲ್ಲಿ ಇದ್ದರು ಎಂದು ನನಗೆ ಗೊತ್ತಿಲ್ಲ. ನನ್ನ ತಂದೆ ಹಾಗೂ ನನ್ನ ಚಿಕ್ಕಪ್ಪಂದಿರು ದಾವಾ ಆಸ್ತಿಗಳಲ್ಲಿ ಹುಟ್ಟಿದ್ದರಾ ಎಂದರೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

5. ನನ್ನ ತಂದೆ 1954 ರಲ್ಲಿ ಚಾಲಗೇಣಿಗೆ ಪಡೆದಂತಹ ಸ್ವತ್ತುಗಳಿಗೆ ಸಂಬಂಧಿತ ದಾಖಲೆ ನನ್ನ ವಕೀಲರಿಗೆ ನೀಡಿದ್ದೇನೆ. ಆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಬಹುದು.

6. ನನ್ನ ತಂದೆಗೆ ಸರ್ವೆ ನಂ.54/1 ಬಿ ಅಸ್ತಿ ದರ್ಖಾಸ್ತು ಆದಾಗ ಬೊಳಿಯ ಪುಜಾರಿ ಜೀವಂತ ಇರಲಿಲ್ಲ. ನಾರಾಯಣ ಪೂಜಾರಿ ಅಂದರೆ ನನ್ನ ತಂದೆ ಬೊಳಿಯ ಪುಜಾರಿರವರ ಹಿರಿಯ ಮಗ. 1963 ರಲ್ಲಿ ನನ್ನ ತಂದೆ (ಐಟಂ ನಂ 17) ಜಮೀನು ಮಂಜೂರಾತಿಗಾಗಿ ಅರ್ಜಿ ಕೊಟ್ಟಿದ್ದು 1964 ರಲ್ಲಿ ಸದರಿ ಜಮೀನು ಮಂಜೂರಾಗಿರುತ್ತದೆ. ಅದೇ ಜಾಗಕ್ಕೆ ಸಂಬಂಧಿಸಿದಂತೆ ನನ್ನ ಚಿಕ್ಕಪ್ಪ ಮೃತ ಶೀನಪ್ಪ ಪೂಜಾರಿ ಅರ್ಜಿ ಕೊಟ್ಟಿದ್ದರೋ ಅಥವಾ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ಜಮೀನು ಮಂಜೂರು ಮಾಡುವ ವ್ಯವಹರಣೆಯಲ್ಲಿ ನನ್ನ ತಂದೆ ಮತ್ತು ನನ್ನ ಚಿಕ್ಕಪ್ಪ ಶೀನಪ್ಪ ಪೂಜಾರಿ ಹೇಳಿಕೆ ಕೊಟ್ಟಿದ್ದಾರೋ ಅಥವಾ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ಐಟಂ ನಂ 17 ಜಾಗ ಮಂಜೂರಾದ ಕಾಲದಲ್ಲಿ ಭೂ ಮಾಲಿಕರ ಹೇಳಿಕೆಯನ್ನು ಪಡೆದಿರುತ್ತಾರೆ.

7. ದಿ.26-03-1963 ರ ರವಿರಾಜ್ ಅರಿಗ ಎನ್ನುವವರ ಹೇಳಿಕೆಯನ್ನು ಸಾಕ್ಷಿಗೆ ತೋರಿಸಿದ್ದು ತಾನು ಕನ್ನಡಕ ತರದ ಕಾರಣ ಅದರಲ್ಲಿರುವುದನ್ನು ಓದಲಾಗುವುದಿಲ್ಲ ಎಂದು ನುಡಿಯುತ್ತಾರೆ. (ಸಾಕ್ಷಿಗೆ ರವಿರಾಜ್ ಅರಿಗ ಎನ್ನುವವರು ದಿ.26-03-1963 ನೀಡಿದ್ದಾರೆ ಎನ್ನುವ ಹೇಳಿಕೆಯನ್ನು ಓದಿ ಹೇಳಲಾಗಿ ಅದನ್ನು ಕೇಳಿದ ಅವರು ಸರಿ ಎಂದು ಒಪ್ಪಿದ ಕಾರಣ ಸದರಿ ದಾಖಲೆಯ ಯಥಾನಕಲನ್ನು ಎದುರುದಾರರ ತಕರಾರಿಗೆ ಒಳಪಟ್ಟು ಗುರುತಿಸಬೇಕೆಂದು ಪ್ರತಿವಾದಿ 2 ರಿಂದ 10 ರವರ ಪರ ವಕೀಲರು ಪ್ರಾರ್ಥಿಸಿದ್ದು ಸದರಿ ದಾಖಲೆಯ ಗುರುತಿಸುವಿಕೆ ಬಗ್ಗೆ ಮೃತ 1 ನೇ ಪ್ರತಿವಾದಿ ವಾರಾಸುದಾರರ ಪರ ವಕೀಲರು ಈಗಾಗಲೇ ಸಾಕ್ಷಿಗೆ 26-03-1963 ರಂದು ರವಿರಾಜ್ ಅರಿಗರವರು ಕಂದಾಯ ಇಲಾಖೆಯವರಿಗೆ ನೀಡಿರುವ ಹೇಳಿಕೆಯನ್ನು ಓದಿ ಹೇಳಿದ್ದು ಅದನ್ನು ಸಾಕ್ಷಿಯು ಒಪ್ಪಿದ ಕಾರಣ ಆ

ದಾಖಲೆಯ ಗುರುತಿಸುವಿಕೆ ಬಗ್ಗೆ ಯಾವುದೇ ತಕರಾರು ಇಲ್ಲ ಆದಕಾರಣ ಸದರಿ ದಾಖಲೆಯನ್ನು ಮೃತ 1 ನೇ ಪ್ರತಿವಾದಿ ವಾರಾಸುದಾರರ ಪರ ದಾಖಲೆಯನ್ನು ನಿಶಾನಿಸಬೇಕೆಂದು ವಾದಿಸಿದ್ದು ಕಲಂ 165 ಭಾರತೀಯ ಅಧಿನಿಯಮ ಸಾಕ್ಷ್ಯ ನಿಯಮದಡಿ ಸಾಕ್ಷಿಗೆ ಆತ ನೀಡಿರುವ ಹಿಂದಿನ ಹೇಳಿಕೆಗಳ ಸಂಬಂಧಿತ ದಾಖಲೆಗಳ ಬಗ್ಗೆ ಹಾಗೂ ಅದಕ್ಕೆ ಸಂಬಂಧಿಸಿದಂತೆ ಪಾಟೀ ಸವಾಲು ಮಾಡಲು ಅವಕಾಶವಿದ್ದು ಮಾನ್ಯ ಒಂದನೇ ಪ್ರತಿವಾದಿ ವಾರಾಸುದಾರರ ಪರ ವಕೀಲರು ದಿ. 26-03-1963 ರಂದು ರವಿರಾಜ್ ಅರಿಗರವರು ನೀಡಿದ್ದಾರೆ ಎಂದು ಹೇಳಲಾದ ದಾಖಲೆಯ ಯಥಾಪ್ರತಿಯನ್ನು ನಿಶಾನಿಸಲು ಓದಿ ಹೇಳಿದ್ದು ಸದರಿ ದಾಖಲೆಗೆ ಸಾಕ್ಷಿಯು ಪಕ್ಷಗಾರರಲ್ಲದ ಕಾರಣ ಮಾನ್ಯ 1 ನೇ ಪ್ರತಿವಾದಿ ವಾರಾಸುದಾರರ ಪರ ಪ್ರಾರ್ಥನೆಯನ್ನು ತಿರಸ್ಕರಿಸಿ ಸದರಿ ರವಿರಾಜ್ ಅರಿಗರವರ ಹೇಳಿಕೆಯ ಯಥಾನಕಲನ್ನು ತಕರಾರಿಗೆ ಒಳಪಟ್ಟು ನಿಡಿ-11 ಎಂದು ಗುರುತಿಸಲಾಯಿತು)

8. ನನ್ನ ತಂದೆ ದಿ. 4-1-1963 ರಂದು ಸರ್ವೆ ನಂ.54/1ಬಿ ಜಮೀನಿನ ಮಂಜೂರಾತಿ ಬಗ್ಗೆ ಕೆಡಿಆರ್-776/72 ರಂತೆ ಅರ್ಜಿಯನ್ನು ಸಲ್ಲಿಸಿದ್ದಾರೆಂದರೆ ಸರಿ. ಸದರಿ ಅರ್ಜಿಯ ಪ್ರತಿಯನ್ನು ನಮ್ಮ ವಕೀಲರಿಗೆ ನೀಡಿದ್ದೇನೆ. ಸಾಕ್ಷಿಗೆ ಸದರಿ ಅರ್ಜಿಯ ಯಥಾನಕಲನ್ನು ತೋರಿಸಲಾಗಿ ಸಾಕ್ಷಿ ಒಪ್ಪಿದ ಕಾರಣ ಸದರಿ ದಾಖಲೆಯನ್ನು ನಿಡಿ-12 ಎಂದು ಗುರುತಿಸಲಾಯಿತು.

9. ದಾವಾ ಐಟಂ ನಂ.17 ರಲ್ಲಿ ರಬ್ಬರ್ ಕೃಷಿ ಇರುತ್ತದೆ. ದಾವಾ ಐಟಂ ನಂ.17 ರಲ್ಲಿ ಯಾವುದೇ ಕಟ್ಟಡ ಇರುವುದಿಲ್ಲ. ಸುನಂದರವರು ಪುತ್ತೂರು ತಾಲ್ಲೂಕಿನ ಕುಂಬ್ರದಲ್ಲಿ ವಾಸವಿದ್ದಾರೆ. ಆನಂದರವರು ಸಂಪ್ಯದಲ್ಲಿ ವಾಸವಿದ್ದಾರೆ. ಅವರು ಮೊದಲು ಪೊಲೀಸ್ ಇಲಾಖೆಯಲ್ಲಿ ಸಬ್ ಇನ್ಸ್ಪೆಕ್ಟರ್ ಆಗಿದ್ದರು. ಸುನಂದರವರು 1 ನೇ ಪ್ರತಿವಾದಿಯ ಮಗ ಸತೀಶ್ ಎನ್ನುವವರ ಮೇಲೆ ದೂರನ್ನು ಕೊಟ್ಟಿರಬಹುದು. ಯಾವ ವಿಚಾರಕ್ಕೆ ಎಂದು ಗೊತ್ತಿಲ್ಲ.

10. ದಾವಾ ಐಟಂ ನಂ.17 ರಲ್ಲಿ ಇರುವ ರಬ್ಬರ್ ಕೃಷಿಯ ಟ್ಯಾಪಿಂಗ್ ನನ್ನ ತಮ್ಮ ಕುಸುಮಾಧರ ಮಾಡುತ್ತಾರೆ. ಸದರಿ ಆಸ್ತಿಯಲ್ಲಿ 800 ರಬ್ಬರ್ ಮರಗಳು ಇರಬಹುದು. ಸದರಿ ರಬ್ಬರ್ ಮರಗಳನ್ನು ಶೀನಪ್ಪ ಪೂಜಾರಿರವರ ಮಗ ಸತೀಶ ನೆಟ್ಟಿದ್ದಾರೆ ಎಂದರೆ ಸರಿಯಲ್ಲ, ಸಾಕ್ಷಿಯು ಮುಂದುವರಿದು ನಾವೇ ನೆಟ್ಟಿದ್ದೇವೆ ಎಂದು ನುಡಿಯುತ್ತಾರೆ. ದಾವಾ ಐಟಂ ನಂ.17 ರಲ್ಲಿ ಇರುವ ರಬ್ಬರ್ ಕೃಷಿಯ ಟ್ಯಾಪಿಂಗ್ ನ್ನು ಸತೀಶರವರೇ ಈಗಲೂ ಕೂಡಾ ಮಾಡುತ್ತಿದ್ದಾರೆ ಎಂದರೆ ಸುಳ್ಳು.

11. ಸರ್ವೆ ನಂ. 54 /1 ಬಿ ಯ ಉತ್ತರ ದಿಕ್ಕಿಗೆ ಸರ್ವೆ ನಂ. 54 /1 ಎ ಸ್ವತ್ತು ಇದೆ ಎಂದರೆ ಸಾಕ್ಷಿಯು ಸದರಿ ಸ್ವತ್ತು ಪೂರ್ವ ದಿಕ್ಕಿಗೆ ಇದೆ ಎಂದು ನುಡಿಯುತ್ತಾರೆ. ಸರ್ವೆ ನಂ. 54 /1 ಎ ಸ್ವತ್ತಿನಲ್ಲಿ ಎ ಎಕರೆ 28 ಸೆಂಟ್ ಸತೀಶರವರಿಗೆ ಮಂಜೂರಾಗಿದೆ

ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ. 55/4 ಎ, ಸರ್ವೆ ನಂ. 55/4 ಬಿ, ಸರ್ವೆ ನಂ. 55/1 ಎ ಸ್ವತ್ತುಗಳು ಯಾರಿಗೆ ಮಂಜೂರಾಗಿವೆ ಎಂದು ನನಗೆ ಗೊತ್ತಿಲ್ಲ. ಸರ್ವೆ ನಂ. 54 /1 ಬಿ ಯ ಪೂರ್ವ,ಪಶ್ಚಿಮ ಮತ್ತು ಉತ್ತರಕ್ಕೆ ಸತೀಶರವರಿಗೆ ಅಕ್ರಮ-ಸಕ್ರಮದಲ್ಲಿ ಮಂಜೂರಾದ ಜಾಗ ಮತ್ತು ದಕ್ಷಿಣಕ್ಕೆ ಶೀನಪ್ಪ ಪೂಜಾರಿರವರಿಗೆ ಮಂಜೂರಾದ ಜಾಗ ಇದೆ ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿಯುತ್ತಾರೆ. ಸತೀಶ ಮತ್ತು ಶೀನಪ್ಪ ಪೂಜಾರಿರವರಗೆ ವಂಜೂರಾದ ಎರಡೂ ಜಾಗಗಳಿಗೆ ಸೇರಿ ಸುತ್ತಲೂ ಒಂದೇ ಬೇಲಿ ಮತ್ತು ಅಗಳು ಇರುತ್ತದೆ ಎಂದರೆ ಸರಿ.

12. ಸರ್ವೆ ನಂ.54/1 ಬಿ ಸ್ವತ್ತಿನ ಭಾವಚಿತ್ರವನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿಗೆ ಒಂದು ಭಾವಚಿತ್ರವನ್ನು ತೋರಿಸಿ ಸದರಿ ಸ್ವತ್ತು ಸರ್ವೆ ನಂ.54/1 ಬಿ ಸ್ವತ್ತಿನದ್ದು ಎಂದರೆ ಸರಿ ಎಂದು ಒಪ್ಪಿದ್ದು ಸದರಿ ಭಾವಚಿತ್ರವನ್ನು ನಿಶಾನೆಪಡಿಸಲು ಪ್ರತಿವಾದಿ 2 ರಿಂದ 10 ರವರ ಪರ ವಕೀಲರು ತಕರಾರು ಮಾಡಿದ್ದು ಸದರಿ ಭಾವಚಿತ್ರ ಸರ್ವೆ ನಂ.54/1 ಬಿ ಸ್ವತ್ತಿನ ಭಾವಚಿತ್ರ ಎಂದು ಸಾಕ್ಷಿ ಒಪ್ಪಿದ ಕಾರಣ ಅವರ ತಕರಾರನ್ನು ತಿರಸ್ಕರಿಸಲಾಗಿದೆ ಮತ್ತು ಭಾವಚಿತ್ರವನ್ನು ನಿಡಿ-13 ಎಂದು ಗುರುತಿಸಲಾಯಿತು.

13. ಸರ್ವೆ ನಂ.54/1 ಬಿ ಸ್ವತ್ತಿನ ನಕ್ಷೆ ನಿಮ್ಮ ಹತ್ತಿರ ಇದೆಯಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ನಮ್ಮ ವಕೀಲರಿಗೆ ನೀಡಿದ್ದೇನೆ ಎಂದು ನುಡಿಯುತ್ತಾರೆ.

14. ಸಾಕ್ಷಿಗೆ ಇನ್ನೊಂದು ಭಾವಚಿತ್ರವನ್ನು ತೋರಿಸಲಾಗಿ ಅದರಲ್ಲಿ ಕಾಣುವ ಸ್ವತ್ತು ಕೂಡಾ ಸರ್ವೆ ನಂ.54/1 ಬಿ ಸ್ವತ್ತಿನದ್ದು ಎಂದು ಸೂಚಿಸಿದ ಪ್ರಶ್ನೆಗೆ ಸರಿ ಎಂದು ಒಪ್ಪಿದ್ದು ಸದರಿ ಭಾವಚಿತ್ರವನ್ನು ನಿಶಾನೆಪಡಿಸಲು ಪ್ರತಿವಾದಿ 2 ರಿಂದ 10 ರವರ ಪರ ವಕೀಲರು ತಕರಾರು ಮಾಡಿದ್ದು ಸದರಿ ಭಾವಚಿತ್ರ ಸರ್ವೆ ನಂ.54/1 ಬಿ ಸ್ವತ್ತಿನ ಭಾವಚಿತ್ರ ಎಂದು ಸಾಕ್ಷಿ ಒಪ್ಪಿದ ಕಾರಣ ಅವರ ತಕರಾರನ್ನು ತಿರಸ್ಕರಿಸಲಾಗಿದೆ ಮತ್ತು ಭಾವಚಿತ್ರವನ್ನು ನಿಡಿ-14 ಎಂದು ಗುರುತಿಸಲಾಯಿತು.

15. ಸಾಕ್ಷಿಗೆ 4 ಭಾವಚಿತ್ರಗಳನ್ನು ತೋರಿಸಲಾಗಿ ಅದರಲ್ಲಿ ಕಾಣುವ ಸ್ವತ್ತು ಕೂಡಾ ಸರ್ವೆ ನಂ.54/1 ಬಿ ಸ್ವತ್ತಿನದ್ದು ಎಂದು ಸೂಚಿಸಿದ ಪ್ರಶ್ನೆಗೆ ಸರಿ ಎಂದು ಒಪ್ಪಿದ್ದು ಸದರಿ ಭಾವಚಿತ್ರಗಳನ್ನು ನಿಶಾನೆಪಡಿಸಲು ಪ್ರತಿವಾದಿ 2 ರಿಂದ 10 ರವರ ಪರ ವಕೀಲರು ತಕರಾರು ಮಾಡಿದ್ದು ಸದರಿ ಭಾವಚಿತ್ರಗಳನ್ನು ಸರ್ವೆ ನಂ.54/1 ಬಿ ಸ್ವತ್ತಿನ ಭಾವಚಿತ್ರಗಳು ಎಂದು ಸಾಕ್ಷಿ ಒಪ್ಪಿದ ಕಾರಣ ಅವರ ತಕರಾರನ್ನು ತಿರಸ್ಕರಿಸಲಾಗಿದೆ ಮತ್ತು ಭಾವಚಿತ್ರಗಳನ್ನು ನಿಡಿ-15 ರಿಂದ 18 ಎಂದು ಗುರುತಿಸಲಾಯಿತು.

16. ಸರ್ವೆ ನಂ.54/1 ಬಿ ಸ್ವತ್ತಿಗೆ ಸಂಬಂಧಿಸಿದ ನಕ್ಷೆಯನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿಗೆ ಒಂದು ನಕ್ಷೆಯ ಪ್ರತಿಯನ್ನು ತೋರಿಸಲಾಗಿ ಅದು ಸರ್ವೆ ನಂ.54/1 ಬಿ ಸ್ವತ್ತಿಗೆ ಸಂಬಂಧಿಸಿದ ನಕ್ಷೆ ಎಂದು ಒಪ್ಪಿದ್ದು ಅದು ನಕ್ಷೆಯ ಪ್ರತಿಯಾದ ಕಾರಣ ಸದರಿ ನಕ್ಷೆಯನ್ನು ಎದುರುದಾರರು ರುಜುವಾತುಪಡಿಸುವ ತಕರಾರಿಗೆ ಒಳಪಟ್ಟು ನಿಶಾನೆಪಡಿಸಬೇಕೆಂದು ಪ್ರತಿವಾದಿ 2 ರಿಂದ 10 ರವರ ಪರ ವಕೀಲರು ತಕರಾರು ಮಾಡಿದ್ದು ಸದರಿ ದಾಖಲೆಯನ್ನು ಸಾಕ್ಷಿ ಒಪ್ಪಿದ ಕಾರಣ ಅವರ ತಕರಾರನ್ನು ತಿರಸ್ಕರಿಸಲಾಗಿದೆ ಮತ್ತು ನಕ್ಷೆಯ ಪ್ರತಿಯನ್ನು ನಿಡಿ-19 ಎಂದು ಗುರುತಿಸಲಾಯಿತು.

17. ಸರ್ವೆ ನಂ.54/1 ಬಿ ಸ್ವತ್ತಿನಲ್ಲಿ ಸತೀಶ ಹಾಗೂ ಅವರ ತಂದೆ ಶೀನಪ್ಪ ಪೂಜಾರಿರವರು 625-ರಬ್ಬರ್, 1 ಸಾವಿರ-ಅಡಿಕೆ, ಹಾಗೂ 15-ತೆಂಗಿನ ಮರಗಳ ಕೃಷಿ ಮಾಡಿದ್ದು ಈಗ ಸತೀಶರವರೇ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸುಳ್ಳು.

18. ಬೊಳಿಯ ಪೂಜಾರಿರವರು ತೀರಿಹೋದ ನಂತರ ಅವರ ಹಿರಿಯ ಮಗನಾದ ನಾರಾಯಣ ಪೂಜಾರಿರವರು ಬೊಳಿಯ ಪೂಜಾರಿರವರ ಸ್ವತ್ತುಗಳನ್ನು ನೋಡಿಕೊಳ್ಳುತ್ತಿದ್ದರು ಎಂದರೆ ಸಾಕ್ಷಿಯು ಅವರ ಎಲ್ಲಾ ಸ್ವತ್ತುಗಳನ್ನು ನೋಡಿಕೊಳ್ಳುತ್ತಿರಲಿಲ್ಲ ಬದಲಾಗಿ ನಾರಾಯಣ ಪೂಜಾರಿರವರಿಗೆ ಸಂಬಂಧಪಟ್ಟ ಸ್ವತ್ತುಗಳನ್ನು ಮಾತ್ರ ನೋಡಿಕೊಳ್ಳುತ್ತಿದ್ದರು ಎಂದು ನುಡಿಯುತ್ತಾರೆ. ನಾರಾಯಣ ಪೂಜಾರಿರವರು ಆ ರೀತಿ ಯಾವಾಗಿನಿಂದ ಸ್ವತ್ತುಗಳನ್ನು ನೋಡಿಕೊಳ್ಳುತ್ತಿದ್ದರು ಎಂದು ಗೊತ್ತಿಲ್ಲ. 1968 ರಿಂದ ಆ ರೀತಿ ಸ್ವತ್ತುಗಳನ್ನು ನಾರಾಯಣ ಪೂಜಾರಿರವರು ನೋಡಿಕೊಳ್ಳುತ್ತಿರಬಹುದಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ಇರಬಹುದು ಎಂದು ನುಡಿಯುತ್ತಾರೆ.

19. ಬೊಳಿಯ ಪೂಜಾರಿರವರ ಸ್ವತ್ತುಗಳಲ್ಲಿ ನಾರಾಯಣ ಪೂಜಾರಿರವರು ತಮಗೆ ಸಂಬಂಧಪಟ್ಟ ಸ್ವತ್ತುಗಳು ಎಂದು ನೋಡಿಕೊಳ್ಳಲು ಸ್ವತ್ತುಗಳು 1970 ರ ಸಾಲಿನಲ್ಲಿ ಬೇರೆ ಬೇರೆಯಾಗಿರಬಹುದಾ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ನನಗೆ ಹೇಳಲಾಗುವುದಿಲ್ಲ, ಕಾರಣ ನಾನು ಚಿಕ್ಕವನಿದ್ದನು ಎದು ನುಡಿಯುತ್ತಾರೆ. ನಾನು 1956 ನೇ ಸಾಲಿನಲ್ಲಿ ಹುಟ್ಟಿದ್ದೇನು. ಆ ಕಾರಣ ನಾನು 1954 ನೇ ಇಸವಿಯ ಬಗ್ಗೆಯಾಗಲೀ ಅಥವಾ ಅದಕ್ಕಿಂತ ಹಿಂದಿನ ವಿಷಯಗಳ ಬಗ್ಗೆ ಹೇಳಲಾಗುವುದಿಲ್ಲ.

20. ಬೊಳಿಯ ಪೂಜಾರಿರವರು ಮೃತರಾದ ನಂತರ ಅವರ ಎಲ್ಲಾ ಗಂಡು ಮಕ್ಕಳು ದಾವಾ ಐಟಂ ನಂ. 1 ರಿಂದ 17 ಸ್ವತ್ತುಗಳನ್ನು ಜಂಟಿಯಾಗಿ ಅನುಭವಿಸುತ್ತಾ ಬರುತ್ತಿದ್ದರು ಎಂದರೆ ಸಾಕ್ಷಿಯು ದಾವಾ ಐಟಂ ನಂ. 1 ರಿಂದ 16 ರಲ್ಲಿ

ಜಂಟಿಯಾಗಿದ್ದರು. 17 ರಲ್ಲಿ ಇಲ್ಲ ಎಂದು ನುಡಿಯುತ್ತಾರೆ. ಸರ್ವೆ ನಂ.54/ 1ಬಪಿ ಸ್ವತ್ತು ದಾವಾ ಐಟಂ ನಂ. 1 ರಿಂದ 16 ಸ್ವತ್ತುಗಳಿಗೆ ಸಂಬಂಧಿಸಿದ ಕುಮ್ಕಿ ಜಾಗ ಎಂದರೆ ಸಾಕ್ಷಿಯು ಅದು ಸರ್ವೆ ನಂ.55/3ಸಿ1 ಗೆ ಸಂಬಂಧಿಸಿದ ಜಾಗ ಎಂದು ನುಡಿಯುತ್ತಾರೆ. ಸರ್ವೆ ನಂ.55/3ಸಿ1 ಆಸ್ತಿಯ ಈಶಾನ್ಯ ದಿಕ್ಕಿಗೆ ಸರ್ವೆ ನಂ.54/1ಬಿ ಸ್ವತ್ತು ಬರುತ್ತದೆ. ನಿಡಿ-19 ದಾಖಲೆಯಂತೆ ಸರ್ವೆ ನಂ.54/1 ಬಿ ಸ್ವತ್ತಿಗೆ ಲಗತ್ತಾಗಿ ಸರ್ವೆ ನಂ.55/3ಸಿ1 ಬರುವುದಿಲ್ಲ ಎಂದರೆ ಸಾಕ್ಷಿಯು ನಮ್ಮ ಪ್ರಕಾರ ಬರುತ್ತದೆ ಎಂದು ನುಡಿಯುತ್ತಾರೆ.

21. ಬೊಳಿಯ ಪೂಜಾರಿಯವರು ಯಾವಾಗ ಸ್ವತ್ತುಗಳನ್ನು ಪಡೆದುಕೊಂಡರು ಎಂದು ಗೊತ್ತಿಲ್ಲ. ಬೊಳಿಯ ಪೂಜಾರಿಯವರು ಯಾವ ರೀತಿ ಸ್ವತ್ತುಗಳನ್ನು ಪಡೆದುಕೊಂಡರು ಎಂದು ನನಗೆ ಗೊತ್ತಿಲ್ಲ ಕಾರಣ ಅವರು ನಾನು ಹುಟ್ಟುವ ಮೊದಲೇ ಸ್ವತ್ತುಗಳನ್ನು ಪಡೆದುಕೊಂಡಿದ್ದರು. 1970 ರಲ್ಲಿ ಬೊಳಿಯ ಪೂಜಾರಿಯವರ ಗಂಡು ಮಕ್ಕಳು ಬಾಯ್ದೆರೆಯಲ್ಲಿ ದಾವಾ ಸ್ವತ್ತುಗಳನ್ನು ವಿಭಾಗ ಮಾಡಿಕೊಂಡರಾ ಎಂದರೆ ನನಗೆ ನೆನಪಿಲ್ಲ.

22. 1 ನೇ ಪ್ರತಿವಾದಿ ಈ ದಾವೆಯಲ್ಲಿ ಏನು ಸಾಧನೆ ಮಾಡಿದ್ದಾರೆಂದು ತಿಳಿದುಕೊಂಡಿದ್ದೇನೆ. ದಾವಾ ಐಟಂ ನಂ. 17 ರ ಜಾಗ ಪಾಲಾಗಿಲ್ಲ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಾವಾ ಐಟಂ ನಂ. 17 ರ ಜಾಗವನ್ನು ಒಬ್ಬನೇ ಕಬ್ಜ ಮಾಡಬೇಕು ಎನ್ನುವ ದುರುದ್ದೇಶದಿಂದ ಹಾಗೂ ದುರಾಸೆಯಿಂದ ಸುಳ್ಳು ಸಾಧನೆಯನ್ನು ಈ ದಾವೆಯಲ್ಲಿ ಮಾಡುತ್ತಿದ್ದೇನೇ ಎಂದರೆ ಸರಿಯಲ್ಲ. ದಾವಾ ಐಟಂ ನಂ. 17 ರ ಜಾಗದಲ್ಲಿ ಕೃತಾವಳಿ ಮಾಡಲು ಮೃತ 1 ನೇ ಪ್ರತಿವಾದಿ ಹಾಗೂ ಅವರ ಮಗ ಸತೀಶ ಬ್ಯಾಂಕಿನಲ್ಲಿ ಸಾಲವನ್ನೂ ಸಹ ಪಡೆದಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

23. ನಮ್ಮ ಕುಟುಂಬ ಅಳಿಯಕಟ್ಟು ಸಂತಾನ ಕಾನೂನಿಗೆ ಒಳಪಟ್ಟಿದೆಯಾ ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿಯುತ್ತಾರೆ. ನನ್ನ ತಂದೆ ದಾವಾ ಐಟಂ ನಂ. 17 ಕ್ಕೆ ಸಂಬಂಧಪಟ್ಟಂತೆ ವ್ಯವಸ್ಥಾ ಪತ್ರ ಮಾಡಿದ ಬಗ್ಗೆ ನನಗೆ ಗೊತ್ತಿಲ್ಲ. ನಾನು ಸುಳ್ಳು ಸಾಧನೆ ಮಾಡಿ ಸುಳುಂಳ ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಬೊಳಿಯ ಪೂಜಾರಿರವರು ಮೂಲಗೇಣಿಗೆ ಪಡದಂತ ದಾವಾ ಐಟಂ ನಂ. 1 ರಿಂದ 16 ಸ್ವತ್ತುಗಳಿಗೆ ದಾವಾ ಐಟಂ ನಂ.17 ಕುಮ್ಕಿ ಜಾಗ ಎಂದರೆ ಗೊತ್ತಿಲ್ಲ. ರವಿರಾಜ್ ಅರಿಗರವರಿಂದ ಮೂಲಗೇಣಿಗೆ ವರ್ಗ ಮತ್ತು ಕುಮ್ಕಿ ಜಾಗಗಳನ್ನು ಸೇರಿಸಿ ಬೊಳಿಯ ಪೂಜಾರಿರವರು ಪಡೆದಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

ಪಾಟೀ ಸವಾಲುಃ ವಾದಿ ಪರಃ

ವಾದಿ ಪರ ವಕೀಲರು ಪಾಟೀಸವಾಲಿಗಾಗಿ ಸಮಯಾವಕಾಶ ಕೋರಿದ್ದು, ನೀಡಲಾಯಿತು.

**(ನನ್ನ ಉಕ್ತಲೇಖನದ ರೀತ್ಯ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ.ಸ.ಇದೆ**

**ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು**
**ಮತ್ತು ಪ್ರಥಮ ದರ್ಜೆ ನ್ಯಾಯಿಕದಂಡಾಧಿಕಾರಿ, ಪುತ್ತೂರು**